# ಕಾನಕಟಯ್ಯಾ ದರಿದ್ರ ನಾರಾಯಣನ ಸೇವಕನಾಗಿದ್ದು

ಮೂಲ ಹಿಂದೀ: **ಸ್ವಾಮಿ ಜಪಾನಂದ** ಕನ್ನಡಕ್ಕೆ : **ರೂಪಶ್ರೀ ನಾಗರಾಜ್**

ಮಧ್ಯ ಕಲ್ಕತ್ತಾದ ಒಂದು ಮೊಹಲ್ಲಾದಲ್ಲಿ ಒಬ್ಬ ಇದ್ದ ಅವನು ೬ ಅಡಿಗಿಂತಲೂ ಉದ್ದ ಮತ್ತು ತೆಳ್ಳಗಿದ್ದ. ಆದರೆ ಕುಸ್ತಿ ಮಾಡುವುದರಲ್ಲಿ ಮತ್ತು ಓದುವುದರಲ್ಲಿ ಮೊದಲಿಗನಾಗಿದ್ದ, ಏನೂ ಕೆಲಸ ಮಾಡುತ್ತಿರಲಿಲ್ಲ. ತಂದೆ-ತಾತಂದಿರು ಒಂದು ಮನೆಯನ್ನು ಬಿಟ್ಟು ಹೋಗಿದ್ದರು. ಅದರ ಬಾಡಿಗೆಯಿಂದಲೇ ಜೀವನ ಸಾಗಿಸುತ್ತಿದ್ದ. ಇಡೀ ದಿನ ಜೂಜು ಮತ್ತು ಇಸ್ಪೀಟ್ ಆಡುವುದು ಮತ್ತು ಗೂಂಡಾಗಿರಿ ಮಾಡುವುದು, ಇವೇ ಅವನ ದಿನಚರಿಯಾಗಿತ್ತು. ಮದುವೆಯಾಗಿರಲಿಲ್ಲ, ಹಾಗಾಗಿ ಬಿಂದಾಸ್ ಇರುತ್ತಿದ್ದ. ಮಾತು ಮಾತಿಗೂ ಕೋಪ ಮಾಡಿಕೊಳ್ಳುತ್ತಿದ್ದ, ಎದುರಿಗೆ ಬಂದವರ ಕಿವಿಯನ್ನೂ ಕಚ್ಚಿಬಿಡುತ್ತಿದ್ದ. ಈ ರೀತಿ ಅವನು ನೂರಾರು ಸಲ ಮಾಡಿದ್ದರೂ, ಅದೇನೋ ಚಾಲಾಕಿತನದಿಂದ ಜೈಲಿನಿಂದ ಆಚೆ ಬಂದು ಬಿಡುತ್ತಿದ್ದ. ನಾಲ್ಕಾರು ತಿಂಗಳು ಹೋಗಿದ್ದಿರಬಹುದು, ಆದರೆ ಬಂದ ಮೇಲೆ ಜೈಲಿಗೆ ಕಳಿಸಿದವರ ಸ್ಥಿತಿಯನ್ನು ದುಃಸ್ಥಿತಿ ಮಾಡುತ್ತಿದ್ದ.

ಒಮ್ಮೆ ಅದೇ ಮೊಹಲ್ಲಾದ ಹತ್ತಿರ ಇದ್ದ ಕಾಳಿಮಾತಾ ಮಂದಿರದಲ್ಲಿ ಪೂಜೆ ಆಗುತ್ತಿತ್ತು. ಅದರ ಆಯೋಜಕರಲ್ಲಿ ಕೆಲವರು ಸಂನ್ಯಾಸಿಗಳೂ ಪರಿಚಿತರಿದ್ದರು. ಆ ಪೂಜೆಯ ಸಂದರ್ಭದಲ್ಲಿ ದರಿದ್ರನಾರಾಯಣರ, ಅಂದರೆ ಬಡವರ ಭೋಜನವನ್ನೂ ಏರ್ಪಡಿಸಲಾಗಿತ್ತು. ಇದನ್ನೆಲ್ಲ ಹೇಳಿ ಸಂನ್ಯಾಸಿಯನ್ನು ಅಗ್ರಹಪಡಿಸಿ, ಅದರಲ್ಲಿ ಭಾಗವಹಿಸಬೇಕೆಂದು ಆಮಂತ್ರಣ ನೀಡಲಾಯಿತು. ಅವನೂ ಅದನ್ನು ಸ್ವೀಕಾರ ಮಾಡಿ ಅಲ್ಲಿಗೆ ಹೋಗಿ ಸೇರಿದ. ಈ ದರಿದ್ರ ನಾರಾಯಣರ ಸೇವೆ ರಾತ್ರಿಯಲ್ಲೇ ನಡೆಯುವುದು ಮತ್ತು ಇಡೀ ರಾತ್ರಿ ನಡೆಯುತ್ತದೆ. ಆಯೋಜಕರಲ್ಲಿ ಒಬ್ಬನು ಬಂದು ಸಂನ್ಯಾಸಿಗೆ ಹೇಳಿದ, ''ನೋಡಿ, ಕಾಳಿ ಮಾತೆಯು ರಕ್ಷಿಸಿದರೆ ಒಳ್ಳೆಯದೇ, ಆ ಆರು ಅಡಿ ಎತ್ತರದ ಮನುಷ್ಯ ನಿಂತಿದ್ದಾನಲ್ಲ, ಅವನನ್ನು ನಾವೆಲ್ಲ ಕಾನಕಟಯ್ಯ (ಕಿವಿ ಕಚ್ಚುವವನು) ಎಂದು ಕರೆಯುತ್ತೇವೆ. ಅವನು ಮಾತು ಮಾತಿಗೂ ಕೋಪಿಸಿಕೊಂಡು, ಜನರ ಕಿವಿ ಕಚ್ಚಿ ಓಡಿಹೋಗುತ್ತಾನೆ. ಎಲ್ಲರಿಗೂ ಅವನನ್ನು ಕಂಡರೆ ಹೆದರಿಕೆ, ಇವತ್ತಂತೂ ರಾತ್ರಿ ಇಡೀ ಪೂಜೆಯಾಗುತ್ತದೆ. ಯುವಕರ ಗುಂಪೆಲ್ಲ ಮೋಜು-ಮಸ್ತಿಯಲ್ಲಿ ಮಗ್ನರಾಗಿರುತ್ತಾರೆ. ಆ ಸಮಯದಲ್ಲಿ ಯಾರಾದರೂ ಇವನನ್ನು ಒಂದು ಚೂರು ಛೇಡಿಸಿದರೂ, ಖಂಡಿತಾ ಇವನು ಅವರ ಕಿವಿಯನ್ನು ಕಚ್ಚುತ್ತಾನೆ.''

ಸಂನ್ಯಾಸಿಯು ಇದನ್ನು ಕೇಳಿ ಚಿಂತಾಕ್ರಾಂತನಾದ. 'ಅರೆ, ಈ ರೀತಿಯಾದರೆ ದೊಡ್ಡ ವಿಷಯವಾಗುತ್ತದೆ' ಎಂದು ಏನೋ ಯೋಚಿಸಿ, ಅವನನ್ನು ತನ್ನ ಹತ್ತಿರ ಕರೆದು ಮೃದುವಾದ ಧ್ವನಿಯಲ್ಲಿ ಹೇಳಿದ, 'ನೀವು ಸ್ವಲ್ಪ ಎಲ್ಲ ನೊಡಿಕೊಳ್ಳಿ, ಪೂಜೆಯಲ್ಲಿ ಏನೂ ವಿಘ್ನ ಆಗಬಾರದು. ಹುಡುಗರು, ಮಕ್ಕಳು ಎಲ್ಲರೂ ಮೋಜಿನಲ್ಲಿದ್ದಾರೆ. ಏನಾದರೂ ತಪ್ಪಿಹೋದರೆ, ಸ್ವಲ್ಪ ಸುಧಾರಿಸಿ ನೀವೇ. ನಿಮಗೆ ಎಲ್ಲರೂ ಪರಿಚಿತರು, ನಿಮ್ಮ ನಿಗಾ ಹಾಗೂ ಕಟ್ಟುನಿಟ್ಟಿನ ಮೇಲ್ವಿಚಾರಣೆಯಲ್ಲಿ ಎಲ್ಲ ಶಾಂತಿಯಿಂದ ಸಾಗುತ್ತದೆ.'

ಕಾನಕಟಯ್ಯಾಗೆ ಸಂನ್ಯಾಸಿ ಹೀಗೇಕೆ ಹೇಳುತ್ತಿದ್ದಾನೆ ಎಂದು ತಿಳಿಯಿತು. ಅವನು ನಗುತ್ತಾ ಹೇಳಿದ, 'ನೀವು ನಿಶ್ಚಿಂತರಾಗಿರಿ, ನನ್ನ ಕಡೆಯಿಂದ ಏನೂ ಅಶಾಂತಿಯಾಗುವುದಿಲ್ಲ.' ಎಲ್ಲರಿಗೂ ಭರವಸೆಯಿತ್ತು, ಅವನು ಮಾತುಕೊಟ್ಟ ಮೇಲೆ ಖಂಡಿತಾ ಅದನ್ನು ಪಾಲಿಸುತ್ತಾನೆ ಎಂದು. ಬೆಳಿಗ್ಗೆ ಪೂಜೆಯು ಸಮಾಪ್ತಿಯಾದ ಮೇಲೆ ಎಲ್ಲರೂ ಪ್ರಸಾದವನ್ನು ತೆಗೆದುಕೊಂಡು ಹೊರಟುಹೋದರು. ರಾತ್ರಿಯಲ್ಲಿ ಒಮ್ಮೆ ಕಾನಕಟಯ್ಯಾನೂ ಹೊರಟುಹೋಗಿದ್ದ, ನಂತರ ಒಂದೂ ಮಾತಿಲ್ಲದೆ ಕುಳಿತಿದ್ದ. ಹಾಗಾಗಿ ಎಲ್ಲ ಕೆಲಸಗಳೂ ಶಾಂತಿಯಿಂದಲೇ ಜರುಗಿದವು. ಮುಂಜಾನೆಯಾದ ಸ್ವಲ್ಪ ಹೊತ್ತಿನಲ್ಲೇ ಪೋಲೀಸ್ ಬಂದು ಕಾನಕಟಯ್ಯಾನನ್ನು ಹುಡಕತೊಡಗಿದರು.

''ಯಾಕೆ, ಏನು ಸಮಾಚಾರ?''

''ನಿನ್ನೆ ರಾತ್ರಿ ಅವನು ಒಬ್ಬ ಮನುಷ್ಯನ ಕಿವಿ ಕಚ್ಚಿದ್ದಾನೆ.''

''ಅರೆ, ಅವನಂತೂ ಇಲ್ಲಿ ಬೆಳಿಗ್ಗೆಯವರೆಗೂ ಶಾಂತಿಯಿಂದ ಕುಳಿತಿದ್ದ, ಆದರೆ ಹಾ, ಮಧ್ಯದಲ್ಲಿ ಒಂದು ಬಾರಿ ಹೊರಟು ಹೋಗಿದ್ದ, ಏನು ಮಾಡಿದನೋ ಗೊತ್ತಿಲ್ಲ.''

ಸಂಜೆಯ ವೇಳೆಗೆ ಕಾನಕಟಯ್ಯಾ ಹಾಜರಾದ, ಸಂನ್ಯಾಸಿಯು ಹೇಳಿದ, ''ನೀವು ಹೊರಟು ಹೋದ ಮೇಲೆ ನಿಮ್ಮನ್ನು ಹುಡುಕುತ್ತಾ ಪೋಲಿಸ್ ಬಂದಿದ್ದರು, ಯಾರದ್ದೋ ಕಿವಿ ಕಚ್ಚಿದ ವಿಚಾರವನ್ನು ಹೇಳಿದರು. ಇದು ನಿಜವೆ?''

''ಹೌದು ನಿಜ, ಇಲ್ಲಿ ನಾನು ಏನೂ ಮಾಡಲಿಲ್ಲ. ಅಲ್ಲಿ ಏನಾಯಿತು ಅಂದರೆ, ರಾತ್ರಿ ನಾನು ನನ್ನ ಮನೆಯ ಕಡೆಗೆ ಹೊರಟೆ. ಆಗ ಆ ಕಡೆಯ ಬದಿಯಿಂದ ಒಬ್ಬ ಮನುಷ್ಯ ತುಂಬ ಜೋರಾಗಿ ಎದೆಯುಬ್ಬಿಸಿ ನಡೆಯುತ್ತಿದ್ದ. ಒಳ್ಳೇ ಬಲಿಷ್ಠ ಹಾಗೂ ಆರೋಗ್ಯವಂತನಾಗಿದ್ದ. ಆದರೆ ನಡುಬೀದಿಯಲ್ಲಿ ಹೀಗೆ ಎದೆಯುಬ್ಬಿಸಿ ನಡೆಯುವುದೆಂದರೆ, ಇದು ನೋಡಿ ನನಗೆ ತಡೆಯಲು ಆಗಲಿಲ್ಲ. ನಾನು ಕೇಳಿದೆ– 'ಯಾಕಪ್ಪಾ? ಈ ರೀತಿ ಎದೆಯುಬ್ಬಿಸಿ ಓಡಾಡುತ್ತಾ ಇದ್ದೀಯ? ಇದು ನಿನ್ನದೇ ಜಾಗ ಅಲ್ಲವಲ್ಲ?'

ಅವನು ಇನ್ನೂ ಹೆಚ್ಚು ಹೆಚ್ಚಾಗಿ ಎದೆಯುಬ್ಬಿಸಿ ಹೇಳಿದ – 'ಮಜವಾಗಿರುತ್ತದೆ, ಮಾಡಿಯೇ ಮಾಡುತ್ತೇನೆ' ಎಂದ. ಆಗ ನನಗೆ ತಡೆದುಕೊಳ್ಳಲು ಆಗಲಿಲ್ಲ, ಅವನ ಕಿವಿಯನ್ನು ಕಚ್ಚಿಬಿಟ್ಟೆ. 'ನೋಡು, ಇದು ನಿನ್ನ ಕಿವಿ. ಈ ರೀತಿ ತುಂಬ ಜನಕ್ಕೆ ಕಚ್ಚಿದ್ದೇನೆ, ಪೊಲೀಸರಿಗೆ ನನ್ನ ಪರಿಚಯವಿದೆ, ನಾಲ್ಕಾರು ದಿನ ಹುಡುಕುತ್ತಾರೆ ಅಷ್ಟೇ' ಎಂದೆ'' ಎಂದ.

ಸಂನ್ಯಾಸಿ ಯೋಚಿಸಿದ – ಈ ಮನುಷ್ಯನೊಂದಿಗೆ ಈ ವಿಚಾರದಲ್ಲಿ ಚರ್ಚೆ ಮಾಡದಿರುವುದೇ ಒಳ್ಳೆಯದು, ಶಾಂತಿಯಿಂದ ಕೆಲಸವನ್ನು ಸಾಧಿಸಬೇಕು.

ಅವನನ್ನು ಕೇಳಿದ – ''ಯಾಕಪ್ಪಾ, ನೀನು ಏನೂ ಕೆಲಸ ಅಥವಾ ಕಾಮಗಾರಿ ಅಂತ ಏನೂ ಮಾಡುವುದಿಲ್ಲವೆ?''

''ಇಲ್ಲ ಸ್ವಾಮಿ, ನಮ್ಮ ಮನೆಯಿದೆ, ಬಾಡಿಗೆ ಸಿಗುತ್ತದೆ. ಅಷ್ಟರಿಂದಲೇ ನಾನು ಜೀವನವನ್ನು ಸಾಗಿಸುತ್ತೀನಿ. ನನ್ನ ಅಮ್ಮ ಮತ್ತು ನಾನು ಅಷ್ಟೆ, ಇನ್ನಾರೂ ಇಲ್ಲ. ಏನು ಸಿಗುತ್ತದೋ ಅಷ್ಟೇ ಸಾಕಾಗುತ್ತದೆ'' ಎಂದ.

''ಓ ಹಾಗಾದರೆ ಇದರ ಅರ್ಥ, ನಿಮ್ಮ ಇಚ್ಛೆಗೆ ಅನುಸಾರವಾಗಿ ನೀವು ಸಮಯದ ಉಪಯೋಗ ಮಾಡುತ್ತೀರಿ. ನೋಡಿ, ಈ ಆಸುಪಾಸಿನಲ್ಲಿ ಬಡವರೇ ಇರುತ್ತಾರೆ ಎಂದು ಗಮನಿಸಿದ್ದೇನೆ. ತುಂಬ ಬಡವರು, ಬಹಳ ಕಷ್ಟದಿಂದ ಜೀವನ ಸಾಗಿಸುತ್ತಾರೆ. ಯಾರಿಗಾದರೂ ಆರೋಗ್ಯದ ಸಮಸ್ಯೆಯಾದರೆ ಬಹಳ ಕಷ್ಟವಾಗುತ್ತದೆ. ಔಷಧಿಗೆಂದು ಆಸ್ಪತ್ರೆಗೆ ಹೋದರೆ, ಅಲ್ಲಿ ಡಾಕ್ಟರು ಗಂಟೆಗಟ್ಟಲೆ ಕಾಯಿಸುತ್ತಾರೆ, ನಂತರ ಸರಿಯಾಗಿ ನೋಡುವುದೂ ಇಲ್ಲ, ಬಡವರೆಂಬ ಕಾರಣಕ್ಕೆ ಬಹಳ ತುಚ್ಛವಾಗಿ ಕಾಣುತ್ತಾರೆ. ಮೊದಮೊದಲು ಈ ದೇಶದಲ್ಲಿ ಬಡವರಾಗಿದ್ದುದು ಅಪರಾಧವೇನೂ ಆಗಿರಲಿಲ್ಲ. ಆದರೆ ಯೂರೋಪಿಯನ್ನರ ಅತೀವ ಪ್ರಭಾವದಿಂದ ಈಗ ಬಡವರನ್ನು ತಪ್ಪಿತಸ್ಥರೆಂದೇ ಪರಿಗಣಿಸಲಾಗುತ್ತಿದೆ. ಆದ್ದರಿಂದ ಯಾರಾದರೂ ಅನಾರೋಗ್ಯದಿಂದ ಇದ್ದಲ್ಲಿ, ಅಸಹಾಯಕರಾಗಿದ್ದಲ್ಲಿ, ನೀವು ಅವರ ಅಲ್ಪ ಸೇವೆಯನ್ನು ಮಾಡಿ, ಅವರ ಮೇಲೆ ಸ್ವಲ್ಪ ಕರುಣೆ ತೋರಿಸಿ. ಆಗ ಅವರೂ ನಿಮ್ಮೊಂದಿಗೆ ಚೆನ್ನಾಗಿ ಬೆರೆಯುತ್ತಾರೆ, ನಿಮ್ಮಿಂದ ಉಪಕೃತರಾಗಿ ಕೃತಜ್ಞರಾಗುತ್ತಾರೆ. ನಿಮ್ಮನ್ನು ದೇವರೆಂದೇ ಭಾವಿಸುತ್ತಾರೆ. ಇದರಲ್ಲಿ ಪ್ರಾಯಶಃ ನಿಮಗೆ ಖರ್ಚಿನ ಬಾಬ್ತು ಏನೂ ತಗಲುವುದಿಲ್ಲ. ಕೇವಲ ಸಮಯವನ್ನು ಖರ್ಚು ಮಾಡಬೇಕು, ನಿಮ್ಮ ಹತ್ತಿರ ಅದು ತುಂಬ ಇದೆ. ಸ್ವಾಮಿ ವಿವೇಕಾನಂದರು ದರಿದ್ರ ನಾರಾಯಣರ ಸೇವೆಯ ಬಗ್ಗೆ ಬಹಳ ಮಹತ್ವ ನೀಡಿದ್ದಾರೆ. ಹಾಗಾಗಿ ಯಾರಾದರೂ ಬಡವರಿದ್ದರೆ ಅವರೊಂದಿಗೆ ಸ್ನೇಹದಿಂದ ವರ್ತಿಸಿ, ಅವರ ಸೇವೆಯನ್ನು ಮಾಡಿದರೆ, ಬಹಳ ಒಳ್ಳೆಯದಾಗುತ್ತದೆ. ನೀವಂತೂ ಬಹಳ ಸಮರ್ಥರು. ಕೇವಲ ಈ ಕಡೆಗೆ ನಿಮ್ಮ ದೃಷ್ಟಿ ಹರಿಸಿದರೆ, ಜನರಿಗೆ ಬಹಳ ಉಪಕಾರವಾಗುತ್ತದೆ!''

''ಹೌದು ಸ್ವಾಮಿ, ಈ ಕೆಲಸವನ್ನು ನಾನು ಸಲೀಸಾಗಿ ಮಾಡುತ್ತೇನೆ.''

''ಈ ಪ್ರದೇಶದಲ್ಲಿ ನನಗೆ ಪರಿಚಿತ ವೈದ್ಯರಿದ್ದಾರೆ, ಅವರಿಂದ ಕೆಲಸ ಮಾಡಿಸುತ್ತೇನೆ, ಅವರೆಲ್ಲ ನನಗೆ ಚೆನ್ನಾಗಿ ಪರಿಚಿತರು. (ಸ್ವಲ್ಪ ಮುಗುಳ್ನಗುತ್ತಾ) ನಾನು ನಿಮಗೆ ಮಾತು ಕೊಡುತ್ತೇನೆ, ಈ ದಿನದಿಂದಲೇ ಈ ಕಾರ್ಯವನ್ನು ಮಾಡುತ್ತೇನೆ. ಇದುವರೆಗೂ ಯಾರೂ ನನಗೆ ಈ ರೀತಿಯಲ್ಲಿ ಹೇಳಿರಲಿಲ್ಲ. ನನಗೀಗ ಚೆನ್ನಾಗಿ ಅರ್ಥವಾಗಿದೆ, ಹೆಚ್ಚಿಗೆ ಹೇಳುವ ಅಗತ್ಯವಿಲ್ಲ.''

''ಓ, ಬಹಳ ಒಳ್ಳೆಯದು, ನೀವು ನಿಮ್ಮ ಮಾತಿನಂತೆ ನಡೆಯುತ್ತೀರಿ ಎಂದು ನನಗೆ ಪೂರ್ಣ ವಿಶ್ವಾಸವಿದೆ. ಬೆಳಿಗ್ಗೆ ಸಂಜೆ ನೀವು ಹೇಗೋ ಸುತ್ತುತ್ತಲೇ ಇರುತ್ತೀರಿ, ಈಗ ಸ್ವಲ್ಪ ವಿಚಾರಿಸಿ, ಆವಶ್ಯಕವಾದ ಸಹಾಯ ನೀಡಿ. ಮಾನವತೆಯ ಪ್ರದರ್ಶನದ ಕಾರ್ಯವನ್ನು ಮಾಡಬೇಕು ಅಷ್ಟೆ. ನೀವು ಮಾಡುವುದನ್ನು ನೋಡೀ ನೋಡೀ ಜನರೂ ಕಲಿಯುತ್ತಾರೆ, ಅಲ್ಲವೆ?''

''ಹೌದು, ಈ ಕೆಲಸವನ್ನು ತುಂಬ ಖುಷಿಯಿಂದ ಮಾಡುತ್ತೇನೆ. ಈ ಪ್ರದೇಶದವರೆಲ್ಲರೂ ನನಗೆ ಪರಿಚಿತರು, ಹಾಗಾಗಿ ಕಾರ್ಯ ಸುಲಭ ಸಾಧ್ಯವಾಗುತ್ತದೆ.''

ಕೆಲವು ವರ್ಷಗಳ ನಂತರ ಸಂನ್ಯಾಸಿಯು ಪುನಃ ಆ ಪ್ರದೇಶಕ್ಕೆ ಹೋಗಿದ್ದ, ಆಗ ಪರಿಚಿತರೊಬ್ಬರು ಭೇಟಿಯಾಗಿ ಹೇಳಿದರು– ''ಆ ಕಾನಕಟಯ್ಯ ಅಂತೂ ಈಗ ಬಡವರ ಬಂಧುವಾಗಿದ್ದಾನೆ. ಯಾರಿಗಾದರೂ ಅನಾರೋಗ್ಯವಾದಲ್ಲಿ, ತಿಳಿಯುತ್ತಿದಂತೆಯೇ ಡಾಕ್ಟರನ್ನು ಕರೆಸಿ ಶುಶ್ರೂಷೆ ಮಾಡಿಸುತ್ತಾನೆ. ವೈದ್ಯರು ಇಲ್ಲವೆನ್ನಲು ಸಾಧ್ಯವೇ ಇಲ್ಲ. ಕಿವಿಯನ್ನು ಕಳೆದುಕೊಳ್ಳುವ ಭಯದಲ್ಲಿ, ಇವನು ಕರೆದ ಕೂಡಲೇ ಹಾಜರಾಗುತ್ತಾರೆ. ದುಡ್ಡು ಕೊಡುತ್ತಾನೋ ಇಲ್ಲವೋ, ಭಯದಿಂದ ಕೇಳುವುದೂ ಇಲ್ಲ. ಬಡವರಂತೂ ಸಂತೋಷದಿಂದ ಹಾರೈಸುತ್ತಾ ಇರುತ್ತಾರೆ. ಆ ಜನರಿಗೆಲ್ಲ ಒಳ್ಳೆದಾಯಿತು. ಯಾರಾದರೂ ಮೃತರಾದರೆ ಕಾನಕಟಯ್ಯ ಸಂಸ್ಕಾರದ ವ್ಯವಸ್ಥೆಯನ್ನು ಮಾಡುತ್ತಾನೆ, ಶವ ಎತ್ತಲು ಯಾರೂ ಇಲ್ಲದಿದ್ದರೆ, ತಾನೇ ಸ್ವತಃ ಹೆಗಲ ಮೇಲೆ ಹೊತ್ತುಕೊಂಡು ಹೋಗಿ ಸಂಸ್ಕಾರ ಮಾಡುತ್ತಾನೆ'' ಎಂದರು.

ಸಂನ್ಯಾಸಿಯ ಆಗಮನದ ವಿಚಾರ ತಿಳಿಯುತ್ತಲೇ ಕಾನಕಟಯ್ಯ ಖುಷಿಯಾಗಿ ಬಂದ, ಬಹಳ ಪ್ರಸನ್ನತೆಯಿಂದ ಇದ್ದ ಮತ್ತು ವಿನಯಪೂರ್ವಕವಾಗಿ ಕುಳಿತ. ಸಂನ್ಯಾಸಿಯು ಹೇಳಿದ – ''ನನಗೆ ವರದಿ ಬಂದಿದೆ, ತುಂಬ ಆನಂದವಾಯಿತು, ಹೀಗೆ ಇರಬೇಕು, ನೀವು ಧನ್ಯರು.''

ಕಾನಕಟಯ್ಯ ಇಷ್ಟೇ ಹೇಳಿದ : ''ನನಗೆ ಮಾನವತೆಯ ಪವಿತ್ರ ಹಾದಿಯನ್ನು ತಿಳಿಸಿಕೊಟ್ಟು, ನೀವು ನನಗೆ ಮಾರ್ಗದರ್ಶಕರಾದಿರಿ. ನಾನು ಸದಾ ನಿಮಗೆ ಋಣಿಯಾಗಿರುತ್ತೇನೆ. ಇದರಲ್ಲಿ ನನಗೆ ಜೀವನದ ಸಫಲತೆಯ ಅರಿವಾಗಿದೆ. ನನಗೆ ಇದೇ ರೀತಿ ಸೇವಾ ಕಾರ್ಯದಲ್ಲೇ ಸ್ಥಿರವಾಗಿರುವ ಬುದ್ಧಿ ಇರಲೆಂದು ನನ್ನನ್ನು ಆಶೀರ್ವದಿಸಿ.''